Regd No BC 155

— ೬೯ —

2—5—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ಪ್ರತ್ಯೇಕ ಮಾನಗಳಿಗೆ
ಅಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಚಂಗಳಿಗೆ 6 ಆಣೆ

Protect the cow

ಸ್ಥಾಪಕರು- ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಆತ್ಮಹತ್ಯೆ

ಕಡೂರಿನಿಂದ ಬಂದಿರುವ ವಾರ್ತೆ.

22 ವಯಸ್ಸಿನ ರಾಮು ಎಂಬ ಯುವಕ ನಲ್ಲಿಯು ಬಳಿ ಹುಡುಗಿಯೋರ್ವಳೊಡನೆ ಅಸಭ್ಯವಾಗಿ ನಡೆದನೆಂಬ ಆಕ್ಷೇಪದ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದವನು ಆತ್ಮಹತ್ಯೆ ಮಾಡಿಕೊಂಡು ಮರಣಹೊಂದಿದನೆಂದು ವಂದಿಯಾಗಿದೆ. ಕೆಲವು ಪೋಲೀಸರು ರಾಮುನನ್ನು ಎಚ್ಚರಿಸಿ ಅಸಂತಾ ಬಡುಗಡೆ ಮಾಡಿದರೆಂದು. ಪುರುದಿನ ಪೋಲೀಸಿನವನೋರ್ವನು ಅವನನ್ನು ಎಳೆದುಕೊಂಡುಹೋದನೆಂದು ಆರೋಪವಿದೆ ಪೋಲೀಸರಿಂದ ಹೊಡೆಯುವ ಪಡುವೆನೆಂಬ ಭೀತಿಯಿಂದ ಅವನು ನದಿಯು ಬಳಿ ಓಡಿ ಪಾಲಿಷಾಲು ಸೇವಿಸಿ ಶಕ್ಷಣ ಮರಣವೊಂದಿದನು. ಅವನನ್ನು ರಕ್ಷಿಸವ ಕಾರ್ಯ ಪ್ರಯೋಜನವಾಗಲಿಲ್ಲ

★

ವಿದುಂಶಾಶ್ವತ್ಥ ದನಗಳ ಸಂತೆಯಲ್ಲಿ ಗೃಹಮಂತ್ರಿ ಶ್ರೀ ಆರ್. ಎಂ ಪಾಟೀಲರವರು ಬಹುಮೂಲ ವಿನಿಯೋಗವನ್ನು ಮಾಡುತ್ತಾ, ವ್ಯವಸಾಯ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಲು ದನಗಳ ಕ್ಷೇಮ ಕಡೆ ಗಮನಿಸಬೇಕೆಂದು ವಿನವಿ ಮಾಡಿದರು.

ಕಳ್ಳಭಟ್ಟಿ ಸಾರಾಯಿ ಮಾಡುತ್ತಿದ್ದವರೆಂದು ಹೇಳಲಾದವರ ಗುಂಪು, ಸೊರಬ ತಾಲ್ಲೂಕಿನ ಬೆನ್ನೂರು ಗ್ರಾಮಕ್ಕೆ ಪ್ರವೇಶಪ್ರತಿಬಂಧ ದಾಳಿ ಮಾಡಲು ಹೋದ ಪೋಲೀಸು ತಂಡದ ಮೇಲೆ ಆಕ್ರಮಣ ಮಾಡಿತೆಂದು ಶಿವಮೊಗ್ಗಾದಿಂದ ಬಂದ ವಾರ್ತೆ ತಿಳಿಸುತ್ತದೆ.

ಈ ತಿಂಗಳು 17 ರಿಂದ 19 ನೆಯ ತಾ|| ವರಿಗೆ ಬೆಂಗಳೂರಿನಲ್ಲಿ ರಾಜ್ಯದ ಶಿಕ್ಷಣ ಸಮ್ಮೇಳನ ಸಮಾವೇಶವಾಗುವುದು.

ಬೆಂಗಳೂರಿನಲ್ಲಿ ನಿನ್ನೆ ಮೇ ದಿನಾಚರಣೆ ಅಷ್ಟು ಉತ್ಸಾಹದಿಂದ ನಡೆಯಲಿಲ್ಲ.

ಮಾಸ್ಕೋನಲ್ಲಿ ನಿನ್ನೆ ಮೇ ದಿನಾಚರಣೆ ನಡೆಯಿತು. ಪೆರೇಡುಗಳಲ್ಲಿ ರಾಕೆಟ್ಟುಗಳು ಹಾರಿದವು.

ವಿವಿಧ ವಿಷಯಗಳು

ಕೊಲಂಬೋ ವಾರ್ತೆಯ ಪ್ರಕಾರ

ಕಳೆದ ಜನವರಿಯಲ್ಲಿ ಆದ ವಿಫಲ ದಂಗೆ ವಿಚಾರಣೆ ಮುಂದಿನ ತಿಂಗಳು ನೊಂದಲಸೆ ಭಾಗದಲ್ಲಿ ಆಗುವುದು. ಪ್ರಾಸಿಕ್ಯೂಷನ್ನಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವಿದೇಶ ವಕೀಲರು ಸೇವನ್ನು ನೀಡುವರು. ಅಡ್ಮಿರಲ್ ರಾಯ್ಸ್‌ಡಿ ಮೆಲ್ ಇನ್ನೂ ಪತ್ತೆ ಆಗಿಲ್ಲ

ಭಾರತದ ಅಧ್ಯಕ್ಷರ ಭಾಷಣದ ವೇಳೆ ಚರ್ಚೆ ನಿನ್ನೆ ನಡೆಯುತ್ತಿದ್ದಾಗ ಕ್ಯಾಬಿನೆಟ್ ಮಟ್ಟದ ಪಂತ್‌ಗಳು ಹಾಜರಿರಿಂದಿದ್ದ ಬಗ್ಗೆ ರಾಜ್ಯಸಭೆಯಲ್ಲಿ ಕೆಲ ಸದಸ್ಯರು ಟೀಕಿಸಿದರು

ಲಂಚ ಸಂದರ್ಭಗಳ ಬಗ್ಗೆ ತೀವ್ರ ಹಾಗೂ ಬೇಗನೆ ಕ್ರಮ ಕೈಗೊಳ್ಳಲು ಭಾರತ ಸರಕಾರ ನಾನಾ ಕ್ರಮಗಳನ್ನು ಕೈಗೊಳ್ಳುವುದೆಂದು ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ

ನವ ದೆಹಲಿಯಿಂದ ಬಂದಿರುವ ವರದಿಯ ಪ್ರಕಾರ ಅರ್ಧ ಲಕ್ಷ ಟನ್ ಸಕ್ಕರೆಯನ್ನು ಬಹಿರಂಗ ಪೇಟೆಗೆ ವ್ಯಾಪಾರಕ್ಕೆ ಬಿಟ್ಟಿದೆ ಎಂದು ನವ ದೆಹಲಿ ವಾರ್ತೆ

ರಾಜ್ಯಸಭೆಯಲ್ಲಿ ಪ್ರಖ್ಯಾತ ಹಿಂದಿ ಕವಿ ಶ್ರೀ ವೈಥಿಲಿ ಶರಣ ಗುಪ್ತರು ಭಾಷಣ ಅಧ್ಯಕ್ಷರ ಭಾಷಣದ ಮೇಲೆ ಪದ್ಯಗಳ ಮೂಲಕ ತಮ್ಮ ಅಭಿಪ್ರಾಯ ಸೂಚಿಸಿದರು ವಿಶಾಲ ಹಿತದಿಂದ, ತೆರಿಗೆ ಹೆಚ್ಚಾದರೂ ಅದನ್ನು ಕೊಡಬೇಕು, ಆದರೆ ಲಂಚ ಸಹ್ಯವನ್ನೇ ಹಿಂಡುತ್ತಿದೆ ಎಂದರು.

ವಿಶಾಖಪಟ್ಟಣ ಜಿಲ್ಲೆಯ ಸಿಕೋರಿ ಗಾವದಲ್ಲಿ ಎಂಡು ಪಂಗಡಗಳಲ್ಲಿ ಹೊಡೆದಾಟವಾಗಿ ಮೂವರು ಮರಣಹೊಂದಿದರು.

ಪೀಕಿಂಗಿನಲ್ಲಿ ನಿನ್ನೆ 30 ಲಕ್ಷ ಜನರು ಮೇ ದಿನಾಚರಣೆ ಆಚರಿಸಿದರು.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಕಯ್ಯ ಜೋಯಿಸರಿಂದ

3 ಚತುರ್ದಶಿ ಆಶ್ವಿನ

ಅಧಿಕಾರಿಗಳ ವೇತನದಲ್ಲಿ ಭೋತಾ ಇಲ್ಲ

ಹಿರಿಯ ಅಧಿಕಾರಿಗಳ ವೇತನಗಳಲ್ಲಿ ಉಗ್ರವಾದ ಭೋತಾ ಸಾಧ್ಯವಾದುದಲ್ಲವೆಂದು ಪ್ರಧಾನಿ ಪಂ|| ನೆಹರು ಶಾಸನ ಸಭೆ ಕಾಂಗ್ರೆಸು ಪಕ್ಷದ ಸಭೆಯಲ್ಲಿ ತಿಳಿಸಿದರೆಂದು. ನವ ದೆಹಲಿ ಪಾರ್ಟಿ ತಿಳಿಸಿತ್ತದೆ ಈ ಸಲಹೆ ಮಾಡಿದವರು ಶ್ರೀ ಬಭೂತಿ ವಿಶ್ರರು. ಸಮಾಜವಾದ ಸಾಧನೆ ಆಗಬೇಕೆಂಬುದಾದರೆ 1 ಸಾವಿರ ರೂ. ಮೇಲೆ ಯಾರಿಗೂ ವೇತನ ಇರಕೂಡದೆಂದು ಅವರು ತಿಳಿಸಿದರು. ಉಸಿರೆಳೆಯುವ ಸಮಾಜವಾದದ ಕಡೆ ತದ್ಮು ಗುರಿಯಿಲ್ಲವೆಂದು ಪಂ|| ನೆಹರು ತಿಳಿಸಿದರು ನಿವೃತ್ತರಾದನಂತರ ಸಂಸ್ಥೆಗಳವರು ಅಧಿಕಾರಿಗಳಿಗೆ ಎಂದೂ ಮಾಸಾಂಶ್ಯು ವೇತನ ಕೊಡುವರು ಎಂದು ತಿಳಿಸಿದರು.

ಪ್ರತ್ಯೇಕ ವರದಿಗಳು

ಅಂತರ ರಾಜ್ಯ ಗಡಿ ಕಲಹ ಸಮಿತಿಯಲ್ಲಿನ ಮೈಸೂರು ಮತ್ತು ಕೇರಳ ರಾಷ್ಟ್ರ ಸದಸ್ಯರು ತಮ್ಮ ವರದಿಯ ಪ್ರಶ್ನೆ ಬಗ್ಗೆ ಒಮ್ಮತಕ್ಕೆ ಬಂದಿಲ್ಲವಾದ ಕಾರಣ ಎರಡು ಪ್ರತ್ಯೇಕ ವರದಿಗಳನ್ನು ಕೊಡುವದು ಅನಿವಾರ್ಯವೆಂದು ಬೆಂಗಳೂರಿನಿಂದ ಬಂದ ವರದಿ ತಿಳಿಸುತ್ತದೆ. ಜೂನ್ ಮಧ್ಯಭಾಗದ ವೇಳೆಗೆ ತಮ್ಮ ತಮ್ಮ ಸರ್ಕಾರಗಳಿಗೆ ಸಮಿತಿಯವರು ವರದಿಯನ್ನು ಸಲ್ಲಿಸುವರೆಂದು ಗೊತ್ತಾಗಿದೆ

★

ಮುಳುಬಾಗಿಲಿಗೆ ನಿನ್ನೆ ಕರ್ನಾಟಕ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಆಗಮಿಸಿದಾಗ ಅವರನ್ನು ವೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಗುರುವಾರದ ಬದಲು ಬುಧವಾರವೇ ಕಾಶ್ಮೀರದ ಚರ್ಚೆ ನಡೆಯುವುದೆಂದು ನ್ಯೂಯಾರ್ಕಿನಿಂದ ವಾರ್ತೆ ಬಂದಿದೆ

ದ್ರಾವಿಡನಾಡಿಗೆ ವಿರೋಧ

ಡಿಎಂಕೆ ನಾಯಕ ಶ್ರೀ ಸಿ ಎನ್ ಅಣ್ಣಾದುರೈರವರು ನಿನ್ನೆ ರಾಜ್ಯಸಭೆಯಲ್ಲಿ ಮಾತನಾಡಿ ಪ್ರತ್ಯೇಕ ದಕ್ಷಿಣದ ದ್ರಾವಿಡನಾಡು ರಚನೆ ಆಗಬೇಕೆಂದೂ ಆದಂ ಭಾಷೆ ಮುಂತಾದ ವಿಚಾರಗಳನ್ನು ಫಜಲ್ ಅಲಿ ಪುನರ್ ಪರಿಶೀಲಿಸುವದೆಂದೂ, ಕಾಂಗ್ರೆಸಿನ ಸದಸ್ಯರಾದ ಶ್ರೀ ಜಿ ಎಚ್ ಪಥಕ್ ಈ ಬೇಡಿಕೆ ಘಟನೆಗೆ ವಿರೋಧ ಎಂದೂ ಕಮ್ಯೂನಿಸ್ಟ್ ಪಕ್ಷದ ಶ್ರೀ ಭೂಪೇಶಗುಪ್ತರು ಮಾತನಾಡಿ ಭಾರತ ಒಂದು, ಇಂಥಹ ವಿಚಾರಗಳಿಗೆ ಇಲ್ಲಿ ಅವಕಾಶಕೊಡಬಾರದೆಂದು ಎಂದರು.

7 ಮಂದಿಯ ಮರಣ

ಪೂರ್ವ ಪಾಕಿಸ್ತಾನದ ರಾಜಷಾಹಿ ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಆಗುತ್ತಿರುವ ಗಲಭೆಗಳಿಗೆ 7 ಮಂದಿ ಸತ್ತು 13 ಮಂದಿ ಗಾಯಗೊಂಡರು ಅಲ್ಪ ಸಂಖ್ಯಾತರ ಮೇಲೆ ದಾಳಿ ಆಗುತ್ತಿದೆ

ಉಪ್ಪಿನ ಉತ್ಪಾದನೆ

ಪೇದೆಯಣ್ಣಾಕೊಳ ಉಪ್ಪಿನ ಉತ್ಪಾದನೆ ಹೆಚ್ಚಿಸುವದೆಂದು ಫ್ರಾನ್ಸಿನ ಉಪ್ಪಿನ ತಜ್ಞ ಫೆಬ್ರವರಿ 10 ದಿನಗಳ ಹಿಂದೆ ತಿಳಿಸಿದ ಸಂಗತಿ ತಿಳಿಯುತ್ತೆಂದು ಮದ್ರಾಸಿನ ವಾರ್ತೆ.

× ಮೈಸೂರಿನಲ್ಲಿ ನಿನ್ನೆ ಉ - ಸ್ಥಾನ ಪತಿ ಪ್ರೊ|| ಎಸ್ ಎ ನಿಕ್ಸನ್, ಇಂಗ್ಲಿಷ್ ಟೀಚಿಂಗ್‌ನ ಕ್ರಮಗಳ ಶಿಕ್ಷಣ ಆರಂಭಿಸುತ್ತಾ, ಇಂಗ್ಲೀಷು ಬೋಧನೆಯು ಮಟ್ಟ ಇಳಿದಿದೆ ಎಂದರು ಪ್ರೊ|| ಗಿರಿ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು

× ಪಾಕಿಸ್ತಾನದ ಜನರು ಭಾರತದಷ್ಟು ತಡೆಯಲು ಅಮ್ಮಾಂದಿನ ಬಳಿ ಜೆಕ್ ಪೋಸ್ಟ್‌ಗಳು ಹೆಚ್ಚಾಗಿವೆ.

ರೂ. 1-33 ಕೋಟಿ ಚಿತ್ರ !

ಲಿಯೊನಾರ್ಡೊ ಎನ್ಸಿಯು ೀ ವರ್ಜಿನ್ ಎಂಡ್ ಚೈಲ್ಡ್ ಚಿತ್ರಕ್ಕೆ ಒಂದು ಮಿಲಿಯ ಪೌಂಡುಗಳಿಗೂ ಹೆಚ್ಚು ಕೊಡಲು ಸಿದ್ಧರಿರುವುದಾಗಿ ಬ್ರಿಟನ್ನಿನ ತಾತ್ಕಾಲಿಕ ಮೂತ್ರಾಲಯವಾಗಿದೆ — ರಾಯಲ್ ಅಕ್ಯಾಡಮಿಯು ಹಣಕಾಸಿನ ಪರಿಸ್ಥಿತಿ ಉತ್ತಮಗೊಳಿಸಿಕೊಳ್ಳಲು ಆ ಚಿತ್ರವನ್ನು 1 ಮಿಲಿಯ ಪೌಂಡಿಗೆ ಮಾರಲು ನಿರೀಕ್ಷಿಸಿದ್ದರು — ಆದರೆ ಅದಕ್ಕೆ ಇನ್ನೂ ಹೆಚ್ಚು ಬೆಲೆ ಹೊರೆಯುವುದನ್ನು ಅಂದು ಮಾರಾಟ ಮುಂದುವರಿಸಲಾಗಿದೆ — ಪ್ರ್ಯಾಟಿಯುಂಗಳು ಪುತ್ರು ಅನೇಕರಿಕಾದ ಕೋಟ್ಯಾಧೀಶ್ವರು ಕೊಳ್ಳುವವರಾಗಿದ್ದಾರೆ

೦೦೦೦

ಪುರಂದರ ದಾಸರು ಕಂಡ ಲೋಕದ ರೀತಿನೀತಿಗಳು

— ನರರೂಪೀ ಶ್ವಾನ —

ಇಂಥವನು ಹುಟ್ಟಿದ ಜನ್ಮದ ಹೀನ ನಾಯಿಯಾಗಿರುತ್ತಾ : ಅವನು ಕೊಟ್ಟ ಮಾತನ್ನು ಹಿಂತಿರುಗಿಸುವುದಿಲ್ಲ ಕೊಟ್ಟ ಭಾಷೆಯಂತೆ ನಡೆಯುವುದೂ ಇಲ್ಲ : ಅವನ ಕಟ್ಟಿಯ ಮೇಲೆ ಕಳಿಸಿಕೊಂಡು ಅಟ್ಟಹಾಸದಿಂದ ಬೊಗಳುತ್ತಾನೆ : ಜ್ಞಾನವಾದ ಪಶ್ಚಾತ್ತಾಪಪಟ್ಟು ಅನಹಾಕಿದವರನ್ನು ಹಂಗಿಸಿ, ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ಕೆಟ್ಟ ಕೆಲಸ ಮಾಡುತ್ತಾನೆ : ಮದುವೆಯಾದ ಹೆಂಡತಿಯನ್ನು ಬಿಟ್ಟು ಅವನು ಪರಸ್ತ್ರೀಯಾನ್ನು ಕೂಡುತ್ತಾನೆ ; ಮತ್ತು ದೇವರನ್ನು ಪೂಜಿಸಿ ಹೊಟ್ಟೆ ಭಜಿಸಲೆ ಹೋಗುತ್ತಾನೆ ; ಇಂಥ ಜನರ ಸಂಗದಿಂದ ಸಜ್ಜನರು ನೊಂದು ಹೋಗುತ್ತಾರೆ : ಆ ದುರ್ಜನರು ತಾವೇ ತಮ್ಮನ್ನು ಹೊಗಳುತ್ತಾರೆ. ಲಜ್ಜೆಯಿಲ್ಲದೆ ಪರರಿಂದ್ಯ ನಿಂದಿಸುತ್ತಾರೆ ಮಾತ್ರ ಗುರು ಹಿರಿಯರನ್ನು ತಿಳಿಯುವುದಿಲ್ಲ ; ಅವರು ಬಡವರನ್ನು ಬಡಿದವರು, ಕೆಟ್ಟ ನುಡಿಗಳನ್ನಾಡಿ ತಪ್ಪಿಸಿಕೊಳ್ಳುವರು, ಒಮ್ಮೆ ಹಿಡಿದ ಮೇಲೆ ಅವರು ಆ ಅನ್ಯಾಯವನ್ನು ಎಂದೂ ಬಿಡುವುದಿಲ್ಲ.

SHAKTI SUDHA

A Superb Tonic

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಸಹಾಯಧ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ — ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲಾಂಡ್ಸ್ ಅತ್ಯವೋಘ 12 ನೇ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವ ಅತ್ಯವೋಘ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಭರಿತ 2 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



19 ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಬಹು ಪ್ರಖ್ಯಾತ ಪುರುಷರಲ್ಲಿ ಒಬ್ಬರಾದ ಪ್ರಥಮ ರೈಲ್ವೇ ಇಂಜನ್ನು ನಿರ್ಮಿಸಿದ, ಮತ್ತಿತರ ಅನೇಕ ದೇಶೋಪ್ಯೋಗಿ ಕಾರ್ಯಗಳನ್ನು ನೆರವೇರಿಸಿದ ಪೀಟರ್ ಕೂಪರರ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.